ಪರಿಷತ್ ಫಾರಂ ಏನಿದೆ, ಅದಕ್ಕೆ ಆದಾಯ ಜಾಸ್ತಿ ಬರುತ್ತಾ ಇದೆ. ಅದನ್ನು ಸರ್ಕಾರಕ್ಕೆ ಕಟ್ಟುತ್ತೀರಿ. ಜಿಲ್ಲಾ ಪರಿಷತ್ತಿನಿಂದ ನಿರ್ವಹಣೆಗೆ ಕೊಡುತ್ತಿರುವ ವೆಚ್ಚ ಕಡಿಮೆಯಾಗುತ್ತಾ ಇದೆ. ಹೀಗಾಗಿ ತುಂಗಾ ನದಿ ದಡದಲ್ಲಿ ಸಾಕಷ್ಟು ನೀರಿರುವಂಥ ಪ್ರದೇಶದಲ್ಲಿ ಎರಡು ಮೂರು ಫಾರಂಗಳು ಕೆಟ್ಟು ಹಾಳಾಗಿ ಹೋಗುತ್ತಿದೆ. ಸರ್ಕಾರದ ಆಸ್ತಿ ನಷ್ಟ ಆಗುತ್ತಾ ಇದೆ. ತಮ್ಮಂಥ ಮಂತ್ರಿಗಳಿದ್ದಾಗ ಈ ರೀತಿ ಆಗಬಾರದು ದಯಮಾಡಿ. ತೀರ್ಥಹಳ್ಳಿಯಲ್ಲಿರುವಂಥ ಫಾರಂಗಳನ್ನು ಸರಿಯಾದ ರೀತಿ ನಿರ್ವಹಿಸುವ ಹಾಗೆ ಅಧಿಕಾರಿಗಳನ್ನು ಎಚ್ಚರಿಸಿ.

ಅಧ್ಯಕ್ಷರು: ಎಲ್ಲ ವಿಚಾರದಲ್ಲಿ ಕ್ರಮ ತೆಗೆದುಕೊಳ್ಳಿ.

ಶ್ರೀ ಡಿ.ಟಿ.ಜಯಕುಮಾರ್: ಅವರ ಸಲಹೆಗಳನ್ನು ಪರಿಗಣಿಸಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು: ಶಿವಪ್ಪನವರ ಪ್ರಶ್ನೆಗೆ ಮಾನ್ಯ ಮಂತ್ರಿಗಳು ಕಾಲಾವಕಾಶ ಕೇಳಿದ್ದಾರೆ.

ಬೆಳಗಾಂ ತಾಲ್ಲೂಕು ಎ ಪಿ ಎಂ ಸಿ ಮತಿಯಿಂದ ರಸ್ತೆ ನಿರ್ವಹಣೆಯ ಬಗ್ಗೆ.

117 (824) ಶ್ರೀ ಬಿ.ಐ. ಪಾಟೀಲ್. (ಉಚಗಾಂವ್): ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂ ತಾಲ್ಲೂಕಿನಲ್ಲಿ ಎ ಪಿ ಎಂ ಸಿ ಮತಿಯಿಂದ ರಸ್ತೆ ನಿರ್ವಹಣೆಯು ಬಹಳ ಕೆಟ್ಟದಾಗಿ ನಿರ್ವಹಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದರೆ, ಸರ್ಕಾರದಿಂದ ದುರಸ್ತಿ ಬಗ್ಗೆ ಕ್ರಮ ತೆಗೆದುಕೊಂಡಿರುವುದೇನು;

ಶ್ರೀ ಹೆಚ್ ನಾಗಪ್ಪ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ- ಆದರೆ ಸರ್ಕಾರದ ಈಗಿನ ನೀತಿಯನುಸಾರ ಸಂಬಂಧಿಸಿದ ಜಿಲ್ಲಾ ಪಂಚಾಯಿತಿಗಳು ಈ ರಸ್ತೆಗಳನ್ನು ನಿರ್ವಹಿಸಬೇಕಾಗಿದೆ.

SRI B.I.PATIL: The answers to my question are not satisfactory. Roads maintained by the APMC are utterly in bad shape. They are not spending single paise. They have also not been taken over by the zilla panchayat, Belgaum. who will repair them?

ಶ್ರೀ ಹೆಚ್. ನಾಗಪ್ಪ: ಸಾರ್ , ರಸ್ತೆಗಳನ್ನು ಮೈಂಟೇನ್ ಮಾಡತಕ್ಕದ್ದು ನಮ್ಮ ಕೆಲಸ ಅಲ್ಲ. ಅದನ್ನು ಜಿಲ್ಲಾ ಪರಿಷತ್ತಿನವರೇ ಮೈಂಟೇನ್ ಮಾಡಬೇಕೇ ಹೊರತು ನಾವು ಮಾಡುವುದಿಲ್ಲ.

SRI B.I. PATIL: He has not sent Circular and therefore the zilla panchayat is also not maintaining. For Kms, the amount is Rs. lakhs. About Kms have been handed over to APMC. Neither zilla panchayat nor APMC are doing this work? who is going to do this work?

ಶ್ರೀ ಹೆಚ್. ನಾಗಪ್ಪ: ಜಿಲ್ಲಾ ಪರಿಷತ್ತಿನವರೇ ಅದನ್ನು ಮೈಂಟೇನ್ ಮಾಡಬೇಕು ನಾವು ಅದನ್ನು ಮೈಂಟೇನ್ ಮಾಡುವುದಿಲ್ಲ.

SRI B.I. PATIL: He may issue circular and therfore the road is in bad condition.

ಶ್ರೀ ಬಿ. ಶಿವರಾಮು: ಅಧ್ಯಕ್ಷರೇ, ಸರ್ಕಾರ ಒಂದು ಸುತ್ತೋಲೆ ಹೊರಡಿಸಿ, ಪ್ರತಿ ಕ್ಷೇತ್ರದಲ್ಲಿ 50 ಕಿಲೋಮೀಟರನ್ನು ಎ.ಪಿ.ಎಂ.ಸಿ. ತೆಗೆದುಕೊಳ್ಳುವಂತೆ ಮಾಡಿದ್ದಾರೆ. ಹೋದಸಾರಿ ಹತ್ತು ಹತ್ತು ಲಕ್ಷ ರೂಪಾಯಿ ಕೊಟ್ಟರು. ಆ ಕೆಲಸ ಅರ್ಧ ಆಗಿದೆ, ಅರ್ಧ ಬಿಟ್ಟಿದೆ. ಜಿಲ್ಲಾ ಪರಿಷತ್ತಿನವರು ಏನು ಹೇಳುತ್ತಾರೆ ಗೊತ್ತಾ ಸರ್ಕಾರದ ಸುತ್ತೋಲೆ ಪ್ರಕಾರ ಅವರಿಗೆ ಹ್ಯಾಂಡ್ ಓವರ್ ಮಾಡಿದ್ದೇವೆ ಎಂದು ಹೇಳುತ್ತಿದ್ದಾರೆ ಬಹುಶಃ ಇದು ಒಬ್ಬರ ಸಮಸ್ಯೆ ಅಲ್ಲ. ಇಡೀ ಎಲ್ಲಾ ಶಾಸಕರ ಕ್ಷೇತ್ರದಲ್ಲಿರತಕ್ಕ ಸಮಸ್ಯೆ ಇದು. ಜಿಲ್ಲಾ ಪರಿಷತ್ತಿನವರು ಒಂದು ಬುಟ್ಟಿ ಮಣ್ಣು ಕೂಡ ಹಾಕುವುದಕ್ಕೆ ಬರುವುದಿಲ್ಲ. ಏಕೆಂದರೆ ಮೈಂಟೆನೆನ್ಸ್ ಗ್ರಾಂಟ್ ನಮಗೆ ಬರುವುದಿಲ್ಲ. ಎ.ಪಿ.ಎಂ.ಸಿ.ನವರಿಗೆ ನಾವು ವಹಿಸಿ ಕೊಟ್ಟಿದ್ದೇವೆ ಎಂದು ಸ್ಪಷ್ಟವಾದ ಉತ್ತರವನ್ನು ಹೇಳುತ್ತಾರೆ. ಎ.ಪಿ.ಎಂ.ಸಿ.ನವರು ಮೈಂಟೇನೂ ಮಾಡುವುದಿಲ್ಲ., ಅಭಿವೃದ್ಧಿಯನ್ನೂ ಪಡಿಸುವುದಿಲ್ಲ. ಜಿಲ್ಲಾ ಪರಿಷತ್ತಿನವರೇ ಮಾಡುತ್ತಾರೆ ಎನ್ನುವುದಾದರೆ ಅವರಿಗೆ ಮೈಂಟೆನೆನ್ಸ್ ಗ್ರಾಂಟ್ ನೀವು ಕೊಡಬೇಕಲ್ಲ. ನೀವು ಏತಕ್ಕೆ ವಹಿಸಿಕೊಂಡಿದ್ದೀರಿ? ಅದಕ್ಕೆ ಒಂದು ಕ್ಲಾರಿಫಿಕೇಷನನ್ನು ಸ್ಪಷ್ಟವಾಗಿ ಜಿಲ್ಲಾ ಪರಿಷತ್ತಿಗೆ ಕೊಡುವಂಥದ್ದನ್ನು ನೀವು ಮಾಡಬೇಕು. ಅವರು ಮೈಂಟೇನ್ ಮಾಡದೇ ರಸ್ತೆ ಹಾಳಾಗಿ ಹೋಗಿ ಬಸ್‌ಗಳು ನಿಂತುಹೋಗಿದೆ ನಮ್ಮಲ್ಲಿ. ಅವರಲ್ಲಿ ಮಾತ್ರವಲ್ಲ ನಮ್ಮಲ್ಲೂ ಅದೇ ಪರಿಸ್ಥಿತಿ ಇದೆ. ಅದಕ್ಕೋಸ್ಕರ ಅಧ್ಯಕ್ಷರ ಅನುಮತಿ ಮೇಲೆ ಇದನ್ನು ಹೇಳುತ್ತಾ ಇದ್ದೇನೆ.

ಶ್ರೀ ಹೆಚ್. ನಾಗಪ್ಪ: ಇದರ ಬಗ್ಗೆ ಜಿಲ್ಲಾ ಪರಿಷತ್ತಿನವರ ಜೊತೆ ಮಾತನಾಡಿ ನಾವು ಮೈಂಟೇನ್ ಮಾಡಬೇಕೋ ಅವರು ಮೈಂಟೇನ್ ಮಾಡಬೇಕೋ ಎಂಬ ಬಗ್ಗೆ 15 ದಿವಸದೊಳಗಡೆ ತೀರ್ಮಾನ ಮಾಡುತ್ತೇವೆ.

ಡಾ: ಎಂ.ಪಿ. ಕರ್ಕಿ: ಈಗ ಎ.ಪಿ.ಎಂ.ಸಿ. ತೆಗೆದುಕೊಳ್ಳತಕ್ಕ ರಸ್ತೆಯನ್ನು ಜಿಲ್ಲಾ ಪರಿಷತ್ತು ಹೇಗೆ ಮೈಂಟೇನ್ ಮಾಡುತ್ತದೆ? ಅದನ್ನು ಎ.ಪಿ.ಎಂ.ಸಿ.ಯವರು ಮಾಡಬೇಕಾಗುತ್ತದೆ ತಾವೇ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕು. ಆ ಜವಾಬ್ದಾರಿ ತೆಗೆದುಕೊಳ್ಳುತ್ತೀರಾ ಎಂಬ ಬಗ್ಗೆ ತಾವು ಉತ್ತರವನ್ನು ಕೊಡಬೇಕು. ರೋಡುಗಳನ್ನು ಎ.ಪಿ.ಎಂ.ಸಿ. ಯವರಿಗೆ ವಹಿಸಿಕೊಟ್ಟುಬಿಟ್ಟಿದ್ದಾರೆ. ಆದ್ದರಿಂದ ಜಿಲ್ಲಾ ಪರಿಷತ್ತು ತನ್ನ ಬಜೆಟ್ಟಿನಿಂದ ಯಾವುದೇ ಹಣವನ್ನು ಖರ್ಚು ಮಾಡುವ ಸ್ಥಿತಿಯಲ್ಲಿಲ್ಲ. ಅದಕ್ಕಾಗಿ ಎ.ಪಿ.ಎಂ.ಸಿ. ಯವರೇ ಮಾಡಬೇಕಾಗುತ್ತದೆ. ಜಿಲ್ಲಾ ಪರಿಷತ್ತಿಗೆ ಮಾಡಿ ಎಂದು ಹೇಳುವುದಕ್ಕಾಗುವುದಿಲ್ಲ.

ಅಧ್ಯಕ್ಷರು: ನೋಡೋಣ. 15 ದಿವಸದಲ್ಲಿ ಚರ್ಚೆ ಮಾಡಿ ತೀರ್ಮಾನ ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದಾರೆ.

ಶ್ರೀ ಯು..ಆರ್. ಸಭಾಪತಿ: ಎ.ಪಿ.ಎಂ.ಸಿ. ಯವರು ಮಾಡುವುದಕ್ಕಿಂತ ಅದನ್ನು ಜಿಲ್ಲಾ ಪರಿಷತ್ತಿಗೇ ಹ್ಯಾಂಡ್ ಓವರ್ ಮಾಡಲಿ. ಅಭಿವೃದ್ಧಿ ಕಾರ್ಯವನ್ನು ಮತ್ತು ಮೈಂಟೆನೆನ್ಸನ್ನು ಜಿಲ್ಲಾ ಪರಿಷತ್ತಿನವರೇ ಮಾಡಿದರೆ ಸೂಕ್ತ ಎಂದು ನನ್ನ ಸಲಹೆ.

ಅಧ್ಯಕ್ಷರು: ಅವರಲ್ಲೊಂದು ಇಂಜಿನಿಯರಿಂಗ್ ಸಬ್‌ಡಿವಿಷನ್ ಇದೆ.

ಶ್ರೀ ಹೆಚ್. ನಾಗಪ್ಪ: ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇವೆ.

ತೋಟಗಾರಿಕಾ ಜಿಲ್ಲೆಯಾಗಿ ಉತ್ತರ ಕನ್ನಡಜಿಲ್ಲೆ

118 (923) ಶ್ರೀ ವಿಶ್ವೇಶ್ವರ ಹೆಗಡೆ (ಅಂಕೋಲಾ): ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯನ್ನು ತೋಟಗಾರಿಕೆ ಜಿಲ್ಲೆಯನ್ನಾಗಿ ಮಾಡುವ ಸರ್ಕಾರದ ಆಲೋಚನೆ ಯಾವ ಹಂತದಲ್ಲಿದೆ?

ಆ) ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಕೃಷಿ ಆಧಾರಿತ ಭೂಮಿಯಿಂದ ತೋಟಗಾರಿಕೆಗೆ ಪ್ರೋತ್ಸಾಹ ಕಡಿಮೆಯಿರುವುದು ನಿಜವಲ್ಲವೆ?

ಇ) ಸರ್ಕಾರವು ತೋಟಗಾರಿಕೆ ಜಿಲ್ಲೆ ಮಾಡುವ ಬಗ್ಗೆ ಸದರಿ ಇಲಾಖೆಯು ಯಾವ ವರದಿ ನೀಡಿದೆ?

ಈ) ಈ ಬಗ್ಗೆ ಸಮಗ್ರ ಅಧ್ಯಯನ ಮಾಡುವುದೇ;

ಶ್ರೀ ಡಿ.ಟಿ. ಜಯಕುಮಾರ್ (ತೋಟಗಾರಿಕೆ ಸಚಿವರು):

ಅ) ಈ ಆಲೋಚನೆ ಇಲ್ಲ.

ಆ) ಇಲ್ಲ.

ಇ) ಈ ಜಿಲ್ಲೆಯನ್ನು ತೋಟಗಾರಿಕೆ ಜಿಲ್ಲೆ ಎಂದು ಪರಿಗಣಿಸುವುದು ಸೂಕ್ತವಲ್ಲ ಎಂದು ವರದಿ ನೀಡಿದೆ.

ಈ) ಉದ್ಭವಿಸುವುದಿಲ್ಲ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ: ಅಧ್ಯಕ್ಷರೆ, ನಮ್ಮ ಜಿಲ್ಲೆಯ ಜನ ರೈತರು ಈ ಉತ್ತರವನ್ನು ನೋಡಿದರೆ ಕಂಗಾಲಾಗುತ್ತಾರೆ. ಏಕೆಂದರೆ ಉತ್ತರ ಕನ್ನಡ ಜಿಲ್ಲೆಯನ್ನು ತೋಟಗಾರಿಕಾ ಜಿಲ್ಲೆ ಎಂದು ಘೋಷಣೆ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಸರ್ಕಾರ ಉತ್ತರದಲ್ಲಿ ಹೇಳಿದೆ. ಹಾಗಾಗಿ